## ಕರ್ನಾಟಕ ವಿಧಾನ ಪರಿಷತ್ತು

## ಸಾರ್ವಜನಿಕ ಮಹತ್ವದ ಸೂಚನೆ (ನಿಯಮ 330)

## ಸದಸ್ಯರ ಹೆಸರು: ಶ್ರೀ ಐವನ್ ಡಿ'ಸೋಜಾ

**ಸೂಚನೆ:** ಸಾಮಾಜಿಕ ಭದ್ರತಾ ಯೋಜನೆಗಳ ಆದಾಯ ಮಿತಿಯನ್ನು ರೂ 32,000/- ಮತ್ತು ರೂ 17,000/- ಗಳಿಂದ ಹೆಚ್ಚಿಸುವ ಬಗ್ಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿ ಯೋಜನೆಗಳಿಂದ ನೀಡುವ ಪಿಂಚಣಿ ಯೋಜನೆಗಳ ಫಲಾನುಭವಿಗಳ ಸ್ಥಿತಿಗತಿಗಳ ಬಗ್ಗೆ, ನಿಯಮ 330 ರಡಿಯಲ್ಲಿ ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

## ಸರ್ಕಾರದ ಉತ್ತರ

ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಿಗೆ ಸಂಬಂಧಿಸಿದಂತೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಪಿಂಚಣಿ ಸೌಲಭ್ಯವನ್ನು ಒದಗಿಸುವ ನೈಜ ಹಾಗೂ ವಸ್ತು ನಿಷ್ಠ ಸ್ವರೂಪವನ್ನಾಗಿಸಲು ಆದಾಯ ಮಿತಿಯನ್ನು ವಾರ್ಷಿಕ 32,000/- ಗಳಿಗೆ ನಿಗದಿಪಡಿಸಿ ಸಂಖ್ಯೆ:ಡಿ.ಎಸ್.ಎಸ್.ಪಿ/ಮಿಸಲೇನಿಯಸ್/05/2020, ದಿನಾಂಕ:10.02.2021ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಮುಂದುವರೆದು, ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಗೆ ವಿಧವಾ ವೇತನ, ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಸಹಾಯಧನ ಮತ್ತು ಎಂಡೋಸಲ್ಫಾನ್ ಸಂತ್ರಸ್ತರಿಗೆ ನೀಡುವ ಮಿತ ವೇತನ ಯೋಜನೆಗಳಿಗೆ ಮೇಲಿನ ಆದಾಯ ಮಿತಿ ಅನ್ವಯಿಸುವುದಿಲ್ಲ. ಈ ಆದಾಯ ಮಿತಿಯನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

**ಕಡತ ಸಂ.ಕಂಇ 91 ಕೆಎಟಿ/ಎಸ್‌ಎಸ್‌ಪಿ/2026**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**